Regd No· M 1299

DYSENTICIDE

Best Specific For

Dysentery & Diarrhoea

Only One Anna Per Packet

SOLD EVERYWHERE

SATYAVADI

ಸತ್ಯವಾದಿ

ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದ್ದು

ಎ ಸೆಕ್ಷನ್

To Let

ಸಂಪುಟ ೩೫] ಮೈಸೂರು —ಬುಧವಾರ **22—7—42** [ಸಂಚಿಕೆ ೪೫

ಸಿ ನಿ ಮಾ

[ಎಕ್. ವಿ ಕೃಷ್ಣಸ್ವಾಮಿ

ಸಾಹು ಮೋಡಕ್ ತಾನು ಸಿನಿಮಾ ನಟಯನ್ನು ಮದುವೆಯಾಗುವುದಿಲ್ಲವೆಂದು ಹೇಳಿರುತ್ತಾನೆ. ಸಿನಿಮಾ ನಟಿಯನ್ನು ಮದುವೆಯಾಗುವ ವಿಷಯದಲ್ಲಿ ಏನೂ ಅಕ್ಷೇಪಣೆಯಿಲ್ಲವಂತೆ. ಆದರೆ ತನಗೆ ಪಾತ್ರ ನಟಿಯನ್ನು ವಿವಾಹ ಮಾಡಲು ಬೇಡವಂತೆ.

ಮೊನ್ನೆ ಸೋಮವಾರಕ್ಕೆ ಹಿಂದಿನ ಸೋಮವಾರ ಪೂನಾದಲ್ಲಿ ' ನವಯುಗ್ ' ರವರ ಹೊಸ ಚಿತ್ರದ ಪ್ರಾರಂಭ ಮುಹೂರ್ತ ನಡೆಯಿತು. ಚಂದ್ರಪ್ರಭಾ ಸಾಹುಮೋದಕರು ಮದನ್ಗಿಗಿತ್ತಿ ಮತ್ತು ಮದನಗಿರ ಪಾತ್ರ ವಹಿಸಿದ್ದರು. ಬೇಡವಂತೆ ! ಅತನಿಗೆ ದುರ್ಗಾಕೋಟಿ. ಶಾಂತ ಆಪ್ಟೆ, ಚಂದ್ರಮೋಹನ್ ಮುಂತಾದವರ ಮೇಲೆ ಅಭಿಮಾನವಂತೆ !

ಆಸ್ಟ್ರೇಲಿಯಾದಿಂದ 4 ಎ. ಆರ್. ಪಿ. ಚಿತ್ರಗಳೂ, ಬ್ರಿಟನ್ನಿನಿಂದ ಕೆಲವೂ ಬಂದಿವೆ. ಇಂಡಿಯಾದೇಶಕ್ಕೆ ತಕ್ಕಂತೆ ಇವನ್ನು ಅನುಸರಿಸಿ ಬೇರೆ ತಯಾರಿಸುವ ವಿಷಯ ಪರಿಶೀಲನೆಯಲ್ಲಿದೆ.

ಭರತಖಂಡದ ಎಲ್ಲಾ ಪ್ರಾಂತಿಕ ಸರ್ಕಾರದವರೂ ಎ. ಆರ್. ಪಿ ಫಿಲ್ಮಗಳನ್ನು ತಯಾರಿಸಲು ತಕ್ಕ ತರದೂದು ನಡೆಸುತ್ತಿರುವರು.

ನ್ಯೂ ಥಿಯೇಟರ್ಸ್‌ನ ' ಮನೋನ್ಮಣಿ ' ಚಿತ್ರದ ತಯಾರಿಕೆಯು ಮುಗಿಯುತ್ತಾ ಬರುತ್ತಿದೆ. ಸುಂದರ ತಾರೆ ರಾಜಕುಮಾರಿಯು ಮುಖ್ಯ ಪಾತ್ರವನ್ನು ಅಂದವಾಗಿ ಅಭಿನಯಿಸಿರುವಳು. ಫಿಲ್ಮಗಳ ಉದ್ದದ ಬಗ್ಗೆ ಇರುವ ಪ್ರತಿಬಂಧಕದ ವಿಷಯದಲ್ಲಿ ಇದಕ್ಕೆ ವಿನಾಯಿತಿ ಕೊಡಲಾಗಿದೆ,

ಮುಂತಾಜ್ ಶಾಂತಿಯು ವಾಲೀಯನ್ನು ವಿವಾಹಮಾಡಿಕೊಳ್ಳುವಳೆಂದು ಹೇಳಲಾಗಿದೆ.

ಲೀಲಾ ದೇಸಾಯಿ ರಣಜಿತ್‌ಗೆ ಸೇರಿ, 2 ನೇ ಸೈಗಾಲ್ ಚಿತ್ರದಲ್ಲಿ ಭಾಗವಹಿಸುವಳೆಂದು ವದಂತಿ.

ವಿ ದೇ ಶ

ರಷ್ಯಾದವರಿಂದ ಹಿಡಿಯಲ್ಪಟ್ಟ ಸಾವಿರಾರು ಮಂದಿ ಜರ್ಮನ್ ಸೈನಿಕರು ಕಳೆದ ಅಕ್ಟೋಬರಿನಿಂದ ಒಟ್ಟಿಗಳನ್ನು ಬದಲಾಯಿಸಿಲ್ಲ, ಮತ್ತು ಸಾಬೂನನ್ನು ಉಪಯೋಗಿಸಿಲ್ಲ. ಎಂದು ಜರ್ಮನ್ ಪತ್ರಿಕೆ ಪ್ರಕಟಿಸಿದೆ.

ಂ ಂ

ಮಾಲ್ಟಾ ಮೇಲೆ ಒಂದು ಪ್ಯಾರಷುಟ್ ಸೈನ್ಯವನ್ನು ಹಿಟ್ಲರ್ ಕಳುಹಿಸಬಹುದೆಂದು ಒಂದು ಪತ್ರಿಕೆಯು ಪ್ರಕಟಿಸಿದೆ. ಆದರೆ ಅಲ್ಲಿ ಮಿತ್ರ ಮಂಡಲಿಯವರ ಏರ್‌ಡ್ರೋಡು ಅಚ್ಚಕಟ್ಟಾಗಿದೆ.

ಂ ಂ

ಲಿಬ್ಯಾದಲ್ಲಿ ಮಿತ್ರ ರಾಷ್ಟ್ರಗಳ ಯುದ್ಧ ಸಾಮಗ್ರಿಗಳೂ ಟ್ಯಾಂಕುಗಳೂ ಹೆಚ್ಚಾಗಿದ್ದರೂ ಟೊಬ್ರೂವಿನ ರೋದೆಲ್ ಹೊಡೆದುದು ಏ|| ಚರ್ಚಿಲ್ಲರಿಗೆ ಆಶ್ಚರ್ಯವನ್ನು ಉಂಟುಮಾಡಿದೆ. ಬ್ರಿಟಿಷರು ಟ್ಯಾಂಕುಗಳು ಕೆಟ್ಟುಹೋದರೆ ಬಿಸಾಡುವರು, ಆದರೆ ಜರ್ಮನರು ಸರಿಪಡಿಸಿಕೊಳ್ಳುತ್ತೆವತ್ತೆ ರಿಪೇರಿಮಾಡಿ 9 ಸಾರಿ ಉಪಯೋಗಿಸುವರಂತೆ.

ಂ ಂ ಂ

ಬ್ರಿಟನ್ನಿನ 4,600,000 ಮಕ್ಕಳಿಗೆ ಪೂರ್ತಿ ವಿದ್ಯಾಭ್ಯಾಸಕ್ಕಿಂತ ಸ್ವಲ್ಪ ಕಡಮೆಯೇ ದೊರೆಯುತ್ತಿರುವುದು.

ಹೋಲಾಪುರದ ಮುನ್ಸಿಪಾಲಿಟಿಯವರು ಸಿನಿಮಾ ಮಂದಿರಗಳ ಮೇಲೆ ಮತ್ತಷ್ಟು ತೆರಿಗೆ ಹೊರಸಬೇಕೆಂದಿರುವರು. ಇದು ಅಲ್ಲಿನ ಸಿನಿಮಾ ಮಂದಿರಗಳ ಮಾಲೀಕರಿಗೆ ಅತೃಪ್ತಿಯನ್ನು ಉಂಟುಮಾಡಿದೆ.

ಸಾಧನಾ ಬೋಸ್‌ಗೆ ಒಳ್ಳೇ ಬಟ್ಟೆಗಳ ಮೇಲೆ ಪ್ರೀತಿ ಹೆಚ್ಚು. ಜೋತಿಷ್ಯದ ಮೇಲೆ ನಂಬಿಕೆ ಹೆಚ್ಚು. ಪ್ರಖ್ಯಾತ ಜೋತಿಷ್ಯರನ್ನು ಆಗಾಗ್ಗೆ ತನ್ನ ಕಷ್ಟಸುಖ ಏಳಿಗೆ ವಿಷಯದಲ್ಲಿ ಕೇಳುತ್ತಿರುವಳಂತೆ

ಯುದ್ಧದ ವಿಷಯದಲ್ಲಿ ಒಬ್ಬ ಜ್ಯೋತಿಷ್ಯರ ಅಭಿಪ್ರಾಯ

ನಾಮನಕ್ಷತ್ರವನ್ನನ್ನನ ನೋಡಿದಲ್ಲಿ ಜಪಾನೀಯರೂ ಜರ್ಮನರೂ ಮಾನುಷ ಗಣಕ್ಕೆ ಸೇರಿದವರು. ರಷ್ಯನ್ನರು ಮತ್ತು ಬ್ರಿಟನ್ನರು ರಾಕ್ಷಸ ಗಣಕ್ಕೆ ಸೇರಿದವರು. ಮನುಷ್ಯನು ಎಷ್ಟು ಬಲವಂತನಾದಾಗ್ಯೂ ಬುದ್ಧಿಕುಶಲತೆಗಳಿಂದ ಕೂಡಿದ್ದಾಗ್ಯೂ ರಾಕ್ಷಸರ ಮಾಯಾಜಾಲದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಅವರೊಂದಿಗೆ ಕೈಕೈ ಮಿಲಾಯಿಸಿ ಹೋರಾಡುವದಂತೂ ಕಲಿಯುಗದಲ್ಲಿ ಆಗದ ಮಾತು, ಈ ಕಾರಣದಿಂದ ಬ್ರಿಟ್ ಮತ್ತು ರಷ್ಯಾಗಳಿಗೆ ಅಂತ್ಯ ಜಯವು ಸಿದ್ಧವು. ಸೆಪ್ಟಂಬರು ತಿಂಗಳು ಕಳೆದ ನಂತರ ಜರ್ಮನಿ ಮತ್ತು ಜಪಾನಿಗಳ ಶಕ್ತಿಯು ಕುಗ್ಗುತ್ತಾ ಬರುವರು. ಕೊನೆಗೆ ಅವರು ನಿಶ್ಶಕ್ತರಾಗಿ ಹಿಂದಕ್ಕೆ ಸುದು ತೆಪ್ಪಗೆ ಕೂತುಕೊಳ್ಳಬೇಕಾದ ಸ್ಥಿತಿಯು ಒದಗುವದು.

(ಓಂ)

ಬೇ ಕಾ ಗಿ ದೆ

ಏಜೆಂಟರಿಲ್ಲದ ಊರುಗಳಲ್ಲಿ ಕತೆಗಾರ ಚಿತ್ರಸಮಾಚಾರ, ವಿಕಟಪಿನೋದಿನಿ, ಕಲಿಯುಗ, ಜನಜೀವನ, ಸತ್ಯವಾದಿ ವಾರಪತ್ರಿಕೆ ಇತ್ಯಾದಿಗಳಿಗೆ ಉತ್ಸಾಹೀ ಏಜೆಂಟರು ಬೇಕು. ಇಂದೇ ಬರೆಯಿರಿ.

ಭಾಗ್ಯೋದಯ ಪಂಚಾಂಗಕರ್ತರ ಜಾತರ ಪುಸ್ತಕಗಳೂ, ಟಿ. ಪಿ. ಕೈಲಾಸಂಸವರ ' ತಾವರೇಕೆರೆ ' ಇಂದೇ ಓದಿರಿ.

ಆರ್. ಎಸ್. ನ್ಯೂಸ್ ಏಜೆನ್ಸಿ
665 ಚಿಕ್ಕಪೇಟೆ, — ಬೆಂಗಳೂರು ಸಿಟಿ.

ಹಾಲು ಪಾನೀಯಗಳು ನಮ್ಮಲ್ಲಿ ಒಂದು ವಿಶೇಷವೇ ಸರಿ!

ಕೆನೆ, ಬೆಣ್ಣೆ ಅತಿ ಮಧುರವಾದ ಕ್ರೀಮ್, ಮೊಸರು

ಇವುಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ.

ಸಿ ಟಿ ಸ ನ್ಸ್ ಡೈರಿ

ಟೆಲಿಫೋನ್ ನಂಬರು **492**
ಪಳೇ ಪೋಸ್ಟಾಫೀಸ್ ರಸ್ತೆ, :: ಮೈಸೂರು

A

ಸೆಕ್ಷನ್

B

ತಪ್ಪದೆ ಓದಿ

ಈ ವಾರದ ಕಥೆ

ಪಾನು

ಎಂ. ಕೆ. ಅನಂತರಾಜು

ಮನಿಸ್ವಾಮಿಗೂ ನನಗೂ ಇದ್ದ ಸ್ನೇಹ ಹೊಸದಲ್ಲ. ನಾವಿಬ್ಬರೂ ಪೂರಾ ಹಳೇ ದೋಸ್ತಿಗಳು. ಅದಕ್ಕೇ ನಾನೆಷ್ಟು ಗೋಳು ಹುಯ್ಕೊಳ್ತಿದ್ರೂ ಅವ್ನೇನೂ ತಿಳ್ಕೊಳ್ತಿದ್ದಿಲ್ಲ. ಎಷ್ಟೋ ಸಲ ಬಾಯಿಗೆಬಂದಹಾಗೆ (?) ಲ್ಲಾ ಬಯ್ದುಬಿಟ್ಟಿದ್ದೇನೆ. ಆದ್ರೂ ಅವ್ನೇನೂ ತಿಳ್ಕೊಳ್ತಿದ್ದಿಲ್ಲ. ಒಂದೇನೂ ಅಂದ್ರೆ ನನ್ಮೆ ಸ್ನೇಹ ಇದ್ದಹಾಗೇ ಇತ್ತು.

ಮುನಿಸಾಮಿ ನನ್ನ ಸ್ನೇಹಿತನು ಅಷ್ಟೇ ಅಲ್ಲ. ನನ್ನ ಪ್ರೈವೇಟ್‌ಸೆಕ್ರೆಟರಿ ಹಾಗೆ, ಒಂದು ಸಲವಂತೂ ಪೂರಾ ಉಪಕಾರ ಮಾಡಿದ್ದ. 'ಪರೋಪಕಾರಂ ಇದಂ ಶರೀರಂ' ಅಂತ ಇಂಥವ್ನನ್ನೇ ನೋಡಿ ಮಾಡಿರ್ಬೇಕು. ನಾನವನ್ನಿನ್ನೂ ಜ್ಞಾಪಿಸಿಕೊಳ್ಳುತ್ತಿದ್ದೇನೆ.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ...., ಇದೇನು ನಾನು ಕತೆಗಿತೆ ಹೇಳ್ತಿದ್ದೀನಿ ಅಂತ ತಿಳ್ಕೋ ಬೇಡಿ. ನಡೆದದ್ದೇ, ನಾನು ಅನುಭವಿಸಿದ್ದೇ ಹೇಳ್ತಿರೋದು.

ಆಗ ನನಗಿನ್ನೂ ಇಪ್ಪತ್ತೊಂದೇ ವಯಸ್ಸು. ಹೈಸ್ಕೂಲಿನಲ್ಲಿ ಓದುತ್ತಿದ್ದೆ ನಾನೇನೋ ಪಾಠಗಳನ್ನೆಲ್ಲಾ ಚೆನ್ನಾಗಿ ಓದುತ್ತಿದೆ. ಆದುದರಿಂದ ಕ್ಲಾಸಿನಲ್ಲಿ ಮುಂದಿದ್ದೆ. ಅದಕ್ಕಾಗಿ ನನ್ನ ಕಂಡ್ರೆ ಎಲ್ಲರಿಗೂ ಸಂತೋಷ.

ನನ್ನ ಸೋದರಮಾವ ಒಬ್ಬ. ಅವನಿಗೊಂದು ಕರೀ ಭೂತದಂತಹ ಮಗಳು. ಆವಳನ್ನು ನನಗೆ ಕೊಟ್ಟು ಲಗ್ನವನ್ನು ಮಾಡಬೇಕೆಂಬ ಆಶೆ ಆತನದು. ಹೇಗಾದರೂ ಈ ವಿಪತ್ತಿನಿಂದ ತಪ್ಪಿಸಿಕೊಳ್ಳಬೇಕೆಂದು ಮುನಿಸಾಮಿ ಮನೆಹೊಕ್ಕೆನು,

×

ರಾಜಣ್ಣಾ ಅಂದ ಮುನಿಸಾಮಿ.

ಆ್ಞಾ, ಅಂದೆ.

ಹಾಗಾದ್ರೆ ಒಂದು ಕೆಲಸ ಮಾಡ., ಈ ಹಿಪ್ಪೋಪಾಟಮಸ್‌ಬಾಯಿಂದ ತಪ್ಪಿಸಿಕೊಳ್ಳೋಕೆ, ಅಂದ ಏನೋ ಯೋಚಿಸಿಕೊಂಡು.

ಆದಂತೂ ಸಾಧ್ಯವಿಲ್ಲಪ್ಪಾ, ಸೋದರಮಾವ ಒಂದು ಥರಾ ಆಸಾಮಿ. ಏನಾದ್ರೂ ತಿಳ್ಕೊಂಡ್ರೂ ತಿಳ್ಕೊಂಡಾನು, ಬೇಡಪ್ಪಾ, ಅಂದೆ. ಆಗಂತೂ ನಾನು ಪೂರಾ ಹೆದರಿಕೊಂಡಿದ್ದೆ.

ಹಾಗಾದ್ರೇ, ಆ ಹುಡಗೀನೇ ಕಟ್ಕೋತೀಯಾ ? ಅಂದ ಬೇಜಾರಿನಿಂದ ಮುನಿಸಾಮಿ.

ಎಲ್ಲಂತೂ ಎಲ್ಲಾದ್ರೂ ದೇಶಾಂತರ! ಅಂದೆ. ಆಗ ಅಂತೂ ನನಗೆ ಪ್ರಪಂಚವೇ ಬೇಕಾಗಿರಲಿಲ್ಲ.

ಬೇಡ. ಒಂದು ಕೆಲಸಮಾಡು, ನಾನು ಸಾಯಂಕಾಲ ನಾಲ್ಕು ಗಂಟೆಗೆ ಬರುತ್ತೀನಿ, ಆ ಮೇಲೆ ಎಲ್ಲಾ ಸರಿಮಾಡ್ತೀನಿ, ನೀನೇನೂ ಹೆದರಕೋ ಬೇಡ, ಅಂದಿದ್ದೆ, ಮನೆಗೆ ಹೋದ.

ನಾನು ಹಾಗೇ ಈಜಿಛೇರ್ ಮೇಲೆ ಒರಗಿಕೊಂಡೆ. ನಿದ್ದೇ ಹೇಗೆ ಬಂದುಬಿಡ್ತೋ ಗೊತಿಲ್ಲ. ಯಾರೋ ಕೂಗಿದಂತಾಗಲು ಕಣ್ಬಿಟ್ಟೆ, ಆಗಲಂತೂ ನನ್ನ ಜೀವಹೋದಹಾಗೇ ಆಯ್ತು. ಏಕೆಂದರೆ, ಪಕ್ಕದ ಕುರ್ಚಿ ಮೇಲೆಯೇ ಸೋದರ ಮಾವ ಸಿಗರೇಟು ಸೇದುತ್ತಾ ಕುಳಿತಿದ್ದ.

ನಡೆಯೋ ರಾಜಣ್ಣ, ಅಂದ.

ಎಲ್ಲಿಗೆ ? ಎಂದು ಹೆದರುತ್ತಾ ಕೇಳಿದೆ. ಆಷ್ಟು ಭಯ ನನಗೆ ಅವನನ್ನು ಕಂಡರೆ.

ಶಾಸ್ತ್ರಿಗಳ ಮನೆಗೆ ಹೋಗಿ ಬರೋಣ, ಜಾತಕಗಳನ್ನು ತೋರಿಸಬೇಕು, ಅಂದ. ನಾನೇನೂ ಮಾತನಾಡಲಿಲ್ಲ. ಅವನು ಮಾತ್ರ ಸಿಗರೇಟು ಸೇದುವದನ್ನು ಮುಂದುವರಿಸುತ್ತಿದ್ದ.

×

ಸಮಯ ಕ್ಕೆ ಸರಿಯಾಗಿ ಹಾಜರ್ ಮುನಿಸಾಮಿ, ಎಲ್ಲಿ ಕ್ಯಾಂಪ್ ಮಾಡಿದ್ದನೋ. ನನಗೆ ನಗೂ ಬಂದಹಾಗಾಯ್ತು ಅವನನ್ನು ನೋಡಿ. ಯಾಕೆಂದರೆ ಅವನು ಪಕ್ಕಾ ಶಾಸ್ತ್ರಿ ಆಗ್ಬಿಟ್ಟಿದ್ದ. ಹಣೆಗೆ ದಪ್ಪವಾಗಿ ವಿಭೂತಿ ಪಟ್ಟೆ, ಮಣಿ ಧೋತ್ರಿ, ಕಂಕುಳಲ್ಲಿ ಪಂಚಾಂಗದ ಕಟ್ಟು, ವಾಹ್ವಾ ಅಂತ ಮನಸ್ಸಿನಲ್ಲೇ ನಕ್ಕೆ.

ಒಂದವನೇ ಶುರುಮಾಡಿದ— ಸ್ವಾಮಿಾ ! ನಾನು ಜೋತಿಷ್ಯ ಒಹು ಚೆನ್ನಾಗಿ ಹೇಳ್ತೀನಿ, ನಾನು ಇದುವರೆಗೆ ಹೇಳಿದ ಮಾತು ಒಂದೂ ಸುಳ್ಳಾಗಿಲ್ಲ. ..... ಇನ್ನೂ ಏನೇನೋ ಹೇಳ್ದ.

ಹಾಗಾದರೆ ಈ ಜಾತಕವನ್ನು ನೋಡಿ, ಅಂತ ಮಾವ ನನ್ನ ಮತ್ತು ಶಾಂತ (ಅವಳ ಹೆಸರು) ಜಾತಕಗಳನ್ನು ಕೊಟ್ಟ. ಆ ಕಪಟಶಾಸ್ತ್ರಿ ಅವುಗಳನ್ನು ನೋಡಹತ್ತಿದ. ಸ್ವಲ್ಪ ಹೊತ್ತಿನ ಮೇಲೆ, ಏನೋ ಯೋಚಿಸಿ, ಗುಣಾಕಾರ ಭಾಗಾಕಾರಗಳನ್ನು ಮಾಡಿ....

ಸ್ವಾಮಿಾ, ಅಂದ.

ಏನು. ಅಂದ ಸೋದರಮಾವ ಆಶ್ಚರ್ಯದಿಂದ.

ಸ್ವಾಮಿ ನೋಡಿ ನಿಜ ಹೇಳ್ತೀನಿ, ನೀವು ಏನೂ ತಿಳ್ಕೋಬಾರದು. ಅಂದ, ಮುನಿಸಾಮಿ, ಅಲ್ಲ, ಆ ಕಪಟ ಶಾಸ್ತ್ರಿ. ಮಾವ ನನ್ನ ಮುಖ ನೋಡಿದ. ಆಗ ಅವನ ಮುಖ ಆಶ್ಚರ್ಯದಿಂದ ಕೂಡಿತ್ತು.

ಏನು ಹೇಳಿ, ಅಂದ ಮಾವ.

ನೋಡಿ, ಈ ಜಾತಕದ ಪುರುಷನಿಗೆ ಎರಡು ತಾರೆಗಳ ಫಲವಿದೆ. ಮೊದಲನೇ ಹೆಂಡತಿಯು, ಮದುವೆಯಾದ ಸ್ವಲ್ಪ ಕಾಲದಲ್ಲೇ ಸಾಯುವಳು ಆದುದರಿಂದ ನಿಮ್ಮ ಮಗಳನ್ನು ಈ ಜಾತಕ ಪುರುಷನಿಗೆ ಕೊಡಬೇಡಿ, ಅಂದುಬಿಟ್ಟ.

ಸೋದರಮಾವನ ಮುಖದಲ್ಲಿ ಬೆವರು ತೊಟ್ಟಿಕ್ಕುತ್ತಿತ್ತು. ಸದ್ದುಮಾಡದೆ ಮಾವ ಮನೆಗೆ ಹೊರಟುಹೋದ.

×

ಏನು ಮಾಡಿಬಿಟ್ಟೆಯೋ ? ಅಂದೆ, ಮುನಿಸಾಮಿಯನ್ನು ಕುರಿತು.

ಏನೇ, ಆ ಕರೀ ಭೂತ ನಿನಗೆ ಗಂಟುಬೀಳುವದಕ್ಕೆ ಕಲ್ಲು ! ಅಂದ ನಗುತ್ತಾ.

ಮೂರನೇ ದಿನ ಬೆಳಿಗ್ಗೆ ಮಾವ ಮನೆಯ ಹತ್ತಿರ ಬಂದಿದ್ದ. ಅದೇನೋ ಅವನ ಮಗಳಿಗೆ ಈಗಲೇ ಮದುವೆಯಾಗಲು ಇಷ್ಟವಿಲ್ಲವಂತೆ ! ಹಾಗೇನಾದರೂ ನನಗೆ ಮದುವೆಯಾಗುವ ಅವಸರವಿದ್ದರೆ ಬೇರೆ ಕಡೆ .... ಇನ್ನೂ ಏನೇನೋ ಸಮಾಧಾನ ಹೇಳತೊಡಗಿದ.

ಅವನಂತೂ ಮುನಿಸಾಮಿ ಮಾತನ್ನು ಸತ್ಯವೆಂದು ನಂಬಿದ. ಹಾಳಾಗಿ ಹೋಗಲಿ. ಪೀಡೆಯೇ ಕಳೀತು.

ಈ ವಾರದ ಭವಿಷ್ಯ

ಮೇಷ

ನಿಮ್ಮ ಆರೋಗ್ಯ ಕೆಡಬಹುದು. ಅಧಿಕಾರಿವರ್ಗದಿಂದ ತೊಂದರೆ. ಮನಸ್ತಾಪಗಳಿಗೆ ಅವಕಾಶವಿದೆ. ಹಣದ ತೊಂದರೆಯಿದೆ.

ವೃಷಭ

ಅನುಕೂಲಗಳ ಸುರಿಮಳೆ. ಯತ್ನಕಾರ್ಯಗಳಲ್ಲಿ ಜಯ. ಧನಾಗಮನ ಚೆನ್ನಾಗಿದೆ.

ಮಿಥುನ

ಅನಾನುಕೂಲಗಳು ಹೆಚ್ಚು, ಆರ್ಥಿಕ ಅಡಚಣೆ ಜೋರಾಗಿದೆ. ಆದರೂ ಬಂಧುಮಿತ್ರರ ಸಹಾಯ ಸಹಾನುಭೂತಿ ಇದೆ. ಧೈರ್ಯದಿಂದ ವರ್ತಿಸಿ.

ಕರ್ಕಾಟಕ

ಮಧ್ಯಮ ಸ್ಥಿತಿ. ಯತ್ನಕಾರ್ಯಗಳಲ್ಲಿ ಸ್ವಲ್ಪ ಅನುಕೂಲ. ಹಣದ ತೊಂದರೆ ಇದೆ, ಆದರೆ ಸ್ವಲ್ಪ ಧನಾಗಮನಕ್ಕೆ ಅವಕಾಶವಿದೆ.

ಸಿಂಹ

ನೌಕರಿ ಉದ್ಯೋಗದಲ್ಲಿ ಲಾಭ, ಹಿಡಿದ ಕೆಲಸಗಳಲ್ಲಿ ಜಯ, ಸಾಂಪತ್ತಿಕ ಸ್ಥಿತಿ ಉತ್ತಮ.

ಕನ್ಯಾ

ಮೇಲಧಿಕಾರಿಗಳಿಂದಲೂ, ಸರ್ಕಾರಿ ಅಧಿಕಾರಿಗಳಿಂದಲೂ ಅನುಕೂಲವಿದೆ. ಹಣದ ಅಡಚಣೆಯಿದೆ. ಆದರೂ ಧೈರ್ಯಗುಂದಬೇಕಾಗಿಲ್ಲ.

ತುಲಾ

ಯಾವ ಕೆಲಸ ಮಾಡಲು ಹೊರಟರೂ ಧೈರ್ಯದಿಂದ ಮಾಡಿ ಎಲ್ಲಾ ಅನುಕೂಲಗಳಿವೆ. ಸಾಂಪತ್ತಿತಿ ಸ್ಥಿತಿ ಉತ್ತಮಗೊಳ್ಳುವುದು.

ವೃಶ್ಚಿಕ

ಅಂತಹ ಅನುಕೂಲಗಳೇನೂ ಇಲ್ಲ, ಧನಾಗಮನ ಸ್ವಲ್ಪ ಕಡಮೆ, ಮನೋ ಚಂಚಲತೆ.

ಧನು

ಕೆಲಸಕಾರ್ಯಗಳಲ್ಲಿ ಅನುಕೂಲವಿದೆ. ದ್ರವ್ಯಾನುಕೂಲವಿದೆ. ಸ್ವಪಂಜನ ಸಹಾಯವಿದೆ.

ಮಕರ

ಕೆಲಸಕಾರ್ಯಗಳಲ್ಲಿ ವಿಘ್ನ, ಹಣದ ಅಡಚಣಿ. ಉಪಾಯವಾಗಿ ಕಾಲತಳ್ಳಿ.

ಕುಂಭ

ಚೆನ್ನಾಗಿ ಸುಖ ಅನುಭವಿಸಿ, ಒಳ್ಳೇ ಕಾಲವಾಗಿದೆ. ಹಣದ ತಾಪತ್ರಯ ಪಡಬೇಕಾಗಿಲ್ಲ. ಪೂಸಸನ್ಮಾನ ಚೆನ್ನಾಗಿದೆ.

ಮೀನ

ಪ್ರಯತ್ನಗಳು ಕೈಗೂಡುವುದು. ಸ್ವಪರಜನ ಸಹಾಯವಿದೆ, ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು.

ಈ ಬೇಸಿಗೆಯಲ್ಲಿ ಹಿಟ್ಲರನ ಅತಿಮುಖ್ಯವಾದ ಕಾರ್ಯ

ಎ. ಜಿ. ಗಾರ್ಡಿನರ್‌ರವರು ಜಾಕ್‌ಯಿಲ್ ಪತ್ರಿಕೆಯಲ್ಲಿ ಈ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಹಿಟ್ಲರಿನ ಇಂದಿನ ಘೋರ ಉದ್ದೇಶವಾದ ಜೂಜಾಟವು ಉನ್ಮತ್ತಾವಸ್ಥೆಯಲ್ಲಿರುವಂಥವನ ಕಾರ್ಯವೆನ್ನಬಹುದಾಗಲಿ ಅಂಥಾ ಜೂಜಾಟವು ಕೂಡ ಆಕಸ್ಮಿಕವಾಗಿ ಸಧ್ಯಕ್ಕೆ ಸಫಲತೆಯನ್ನು ಹೊಂದಬಹುದೆಂಬ ವಿಷಯವನ್ನು ಜಪಾನೀಯರು ನಮಗೆ ಕಲಿಸಿದ್ದಾರೆ. ಜಪಾನೀಯರು ಏನಾದರೂ ಸಿಲೋನಿನಲ್ಲಿ ಬೇರೂರಿದ ಪಕ್ಷದಲ್ಲಿ ಅಗಸ್ಟ್ ತಿಂಗಳ ಸಮಯಕ್ಕೆ ಅವರು ಪರ್ಷ್ಯಕ್ಕೆ ಖಾರಿಯಲ್ಲಿರಲು ಸಾಧ್ಯವಾಗುತ್ತದೆ. ಆದುದರಿಂದ ಮಿತ್ರರಾಷ್ಟ್ರಗಳು ಈ ವಿಷಯದಲ್ಲಿ ಜಾಗರೂಕರಾಗಿರತಕ್ಕದ್ದು. ಆ ಸಮಯಕ್ಕೆ ಸರಿಯಾಗಿ ಹಿಟ್ಲರನೂ ಕಾಕ್ಸಸ್ ಮೂಲಕ ನುಗ್ಗಿ ಬಂದು ಪರ್ಷ್ಯಕ್ಕೆ ಖಾರಿಯಲ್ಲಿರಬಹುದಾದ ಜಪಾನೀಯರೊಂದಿಗೆ ಸೇರಬಹುದು.

ಈ ಬೇಸಿಗೆಯಲ್ಲಿ ಹಿಟ್ಲರನ ಮುಖ್ಯ ಕೆಲಸವು ರಷ್ಯದ ಬೆನ್ನೆಲಬನ್ನು ಮುರಿಯುವದು. ಬೇರೆ ಕಡೆಗೆ ತನ್ನ ದೃಷ್ಟಿಯನ್ನು ಪ್ರಸರಿಸುವಂತಿಲ್ಲ. ಜಯಶೀಲವಾದ ರಷ್ಯನನ್ನು ಹಿಂದೆ ಇಟ್ಟುಕೊಂಡು ಮುಂದೆ ನುಗ್ಗುವದು ಅಸಂಭವ.

ಹಿಟ್ಲರನಿಗೆ ಸಾಧನಗಳು ಎಷ್ಟೇ ಇರಲಿ ಮುಂದಿನ ಬೇಸಿಗೆಯ ವೇಳೆಗೆ ಒಂದು ಕೈಯಿಂದ ರಷ್ಯವನ್ನೂ ಎರಡನೆಯ ಕೈಯಿಂದ ಮಧ್ಯಪೂರ್ವಭಾಗಗಳನ್ನು ತನ್ನ ಹಿಡಿತದೊಳಗೆ ತಂದುಕೊಳ್ಳುವದು ಆಗದ ಮಾತು. ಎರಡು ಕಡೆಗಳಲ್ಲಿಯೂ ಸೋಲು ಖಂಡಿತ.

ಇಂಡಿಯಾ ವಿಚಾರ

ಆದರೂ ನಾವು ಸುಮ್ಮನೆ ಕೂತಿರಕೂಡದು. ಜೂಜಾಟವು ಹುಚ್ಚು ದೇಗಿಸುವಂಥಾದ್ದು. ಮುಂದಿನ ಯೋಚನೆಯಿಲ್ಲದೆ ಮುನ್ನುಗ್ಗಿಸುವಂಥಾದ್ದು. ನ್ಯಾಯ-ಅನ್ಯಾಯ, ಪಾಪ-ಪುಣ್ಯ, ಸತ್ಯ-ಅಸತ್ಯ, ಒಳ್ಳೇದು-ಕೆಟ್ಟದ್ದು ಎಂಬ ವಿಷಯದ ಕಡೆ ದೃಷ್ಟಿ ಇರುವುದಿಲ್ಲ. ಉನ್ಮತ್ತನಂತೆ ಮುಂದೆ ನುಗ್ಗುವಂತೆ ಮಾಡುವಂಥಾದ್ದು. ದೇಹದ ಮೇಲಿನ ಧ್ಯಾನವೂ ಕೂಡ ಇಲ್ಲದೆ ಮುಂದೆ ಮುಂದೆ ಹೋಗುವಂಥವರಿಗೆ ಸ್ವಲ್ಪಕಾಲ ಜಯವು ಕೂಡ ಪ್ರಾಪ್ತವಾಗಬಹುದು.

ಶತ್ರುಗಳು ಈಗ ಇಂಡಿಯಾದೇಶದ ಹೆಬ್ಬಾಗಿಲಿನಲ್ಲಿರುವರು. ಆಸ್ಟ್ರಲೇಷಿಯಾವಿಗೂ ಹೆದರಿಕೆಯನ್ನುಂಟುಮಾಡುತ್ತಿರುವರು. ಇಂಡಿಯಾ ದೇಶದ ಮೇರೆಯಲ್ಲಿ ಎಲ್ಲಿಯೂ ಆವರನ್ನು ಒಳಕ್ಕೆ ಪ್ರವೇಶಿಸಿದಂತೆ ಮಾಡಲು ಯಾವ ಕೋಟೆಕೊತ್ತಲುಗಳಾಗಲಿ ಇತರ ಅಡ್ಡುಗಟ್ಟುವಿಗಳಾಗಲಿ ಇಲ್ಲ. ಸಾಲದ್ದಕ್ಕೆ ಇಂಡಿಯಾ ದೇಶೀಯರಲ್ಲಿ ಸ್ವಾತಂತ್ರ್ಯ ಚಳುವಳಿಯು ಬೇರೆ ಎದ್ದಿದೆ. ಇಂದಿನ ಈ ಸ್ಥಿತಿಯಲ್ಲಿ ಇಂಡಿಯಾ ದೇಶಕ್ಕೆ ಜರ್ಮನಿಗಿಂತ ಜಪಾನಿನ ಭಯವೇ ಹೆಚ್ಚಾಗಿದೆ.

ಹಿಂದೂದೇಶ

ಬರ್ಮಾದಿಂದ 1000 ಕ್ಕೆ ಮೇಲ್ಪಟ್ಟು ಮುಸ್ಲಿಂ ಮಹಿಳೆಯರು ಕಲ್ಕತ್ತಾಕ್ಕೆ ಬಂದಿದ್ದಾರೆ.

ಂ ಂ

ಉತ್ತರ ಬೀಹಾರಿನ ಮದೀಪುರದಲ್ಲಿನ ಒಂದು ಖಾದಿ ಭಂಡಾರಕ್ಕೆ 4 ಜನರು ಹೋಗಿ ಅಂಗಡಿಯವನ ಬಾಯಿಗೆ ಬಟ್ಟೆ ತುರುಕಿ, ಬೀಗದಕೈ ತೆಗೆದುಕೊಂಡು ಪೆಟ್ಟಿಗೆಯಲ್ಲಿದ 1500 ರೂಪಾಯಿಗಳನ್ನು ಹಾರಿಸಿಕೊಂಡು ಪರಾರಿಯಾದರು.

ಂ ಂ ಂ

'ಪನ್ನಾ' ವಜ್ರಗಳು ಪ್ರಪಂಚದಲ್ಲೆಲ್ಲಾ ಅತಿ ಶ್ರೇಷ್ಠವಾದುವೆಂದು ಸರ್ ಸಿ ವಿ. ರಾಮರ್‌ರವರು ಅಭಿಪ್ರಾಯಪಟ್ಟಿರುವರು.

ಂ ಂ ಂ

'ಹೆಚ್ಚು ಆಹಾರ ಬೆಳೆಯಿರಿ' ಎಂಬ ಚಳವಳಿಯು ಎಲ್ಲಾ ಕಡೆ ಹೊರಟಿದೆಯಷ್ಟೆ. ಬಂಗಾಳ ಸರ್ಕಾರದವರು 'ಹೆಚ್ಚು ಮೀನು ಬೆಳೆಯಿರಿ' ಚಳವಳಿಯನ್ನು ಪ್ರಾರಂಭಿಸುವವರಾಗಿದ್ದಾರೆ.

ಂ ಂ ಂ

ಲಕ್ನೋದ ಗೌರವ ಕುಟುಂಬದ 3 ಹುಡುಗಿಯರು ಮನೆಯಿಂದ ತಪ್ಪಿಸಿಕೊಂಡಿರುವರಂತೆ. ಮನೆಯವರು ಪೋಲೀಸರಿಗೆ ತಿಳಿಸಿದರೆ ಅವಮಾನವಾದೀತೆಂದು ತಾವೇ ಹುಡುಕಿ ಪ್ರಯೋಜನವಾಗದೆ ತೆಪ್ಪಗಾದರಂತೆ. ಈ ಪೈಕಿ ಒಬ್ಬಳು ಸಿನಿಯಾರೋ ಒಬ್ಬ ಲಕ್ಷಣವಾದ ಯುವಕನೊಡನೆ ಹೊರಟುಹೋಗಿ ರಾತ್ರಿಯೆಲ್ಲಾ ಕುಷಾಮತ್ತಿನಿಂದ ಕಾಲಾ ಕಳೆದು ಕೊಂಡು. ಮಾರನೇ ಬೆಳಿಗ್ಗೆ ಮನೆಗೆ ಒಂದಳಂತೆ!

ಂ ಂ

ಸಿಂಧೂದೇಶದಿಂದ ಹರಾರರನ್ನು ಹೊರಡಿಸುತ್ತಿರುವ ಕಾರ್ಯವು ಚೆನ್ನಾಗಿ ನಡೆಯುತ್ತಿದೆ. ಇಂಡಿಯಾದ ಪ್ಯಾರಾಜೂಟ್ ಸೈನ್ಯಗಳು ಅವರ ಮೇಲೆ ಕಾರ್ಯಾಚರಣೆ ನಡೆಸುತ್ತಿವೆ.

ಂ ಂ

ಶ್ರೀ ರಾಜಗೋಪಾಲಾಚಾರಿಯವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿರುವರು.

ಂ ಂ

ಅಲಹಾಡಿನಲ್ಲಿ ಬೀದಿಗುಡಿಸುವವರು ಸಭೆ ನಡೆಸಿ, ಮುನಿಸಿಪಲ್ ಆಫೀಸಿಗೆ ಮೆರವಣಿಗೆಯಿಂದ ಹೋಗಿ ತಮ್ಮ ಹೇಳಿಕೆಯನ್ನು ಅಲ್ಲಿಯ ಅಧಿಕಾರಿಗಳಿಗೆ ತಿಳಿಸಿದರು. ಆ ಪೈಕಿ ಇವೂ ಕೆಲವು—ಮುನಿಸಿಪಾಲಟಿಯು ಕೆಲವು ಅಧಿಕಾರಿಗಳನ್ನೂ, ಸ್ಯಾನಿಟರಿ ಇನ್‌ಸ್ಪೆಕ್ಟರುಗಳ ಕೆಲಸಗಳನ್ನೂ ತಮಗೆ ಕೊಡಬೇಕು, ಮುನಿಸಿಪಲ್ ಬೋರ್ಡಿಗೆ ಇಬ್ಬರು ಮೆಂಬರುಗಳನ್ನು ತಮ್ಮಿಂದ ನೇಮಿಸಬೇಕು, ಮತ್ತು ತಮಗಾಗಿ ಆಸ್ಪತ್ರೆ, ಹೆಚ್ಚು ಸಂಬಳ, ರಜಾ ಅನುಕೂಲತೆ ಇವುಗಳೆಲ್ಲಾ ದೊರೆಯಬೇಕು.

ಮಹಾತ್ಮಾಜಿಯವರಿಗೆ ಜಿನ್ನಾರವರ ಎಚ್ಚರಿಕೆ

"ಸ್ವತಂತ್ರ ಹಿಂದೂಸ್ಥಾನ" ದ ವಿಚಾರದಲ್ಲಿ ಮಹಾತ್ಮರಿಗೂ ನನಗೂ ಬಹಳ ಅಂತರವಿದೆ ಹಿಂದೂಸ್ಥಾನದ ಸ್ವಾತಂತ್ರ್ಯವೆಂದರೆ ಹಿಂದುಗಳು ಮುಸ್ಲಿಂ ಹಾಗೂ ಉಳಿದವರ ಸ್ವಾತಂತ್ರ್ಯವೆಂದು ನಾನು ಅರ್ಥಮಾಡುತ್ತೇನೆ ಆದರೆ ಮಹಾತ್ಮರ ಸ್ವಾತಂತ್ರ್ಯದ ಅರ್ಥವೆಂದರೆ 'ಕಾಂಗ್ರೆಸ್ ರಾಜ' ಎಂದು ಮುಂತಾದ ಆಶಯದ ಹೇಳಿಕೆಯನ್ನು ಮುಸ್ಲಿಂಲೀಗಿನ ಅಧ್ಯಕ್ಷರಾದ ಜಿನ್ನಾರವರು ಪ್ರೆಸ್ಸಿಗೆ ಕೊಟ್ಟಿರುವರು.

ಅವರು ಮತ್ತೂ ಹೇಳಿದ್ದೇನೆಂದರೆ, ಬ್ರಿಟಿಷರ ಸಹಾಯದಿಂದ ದೊರೆಯುವ ಪಾಕಿಸ್ತಾನದಲ್ಲಿ ನಮ್ಮ ವಿಶ್ವಾಸವಿಲ್ಲ. ಪಾಕಿಸ್ತಾನವೆಂದರೆ ಮುಸ್ಲಿಂ ಇಂಡಿಯಾದ ಒಂದು ಸೂತ್ರವು ನಮ್ಮ ವೇಲೆಯೇ ಅವಲಂಬಿಸಿರುವುದು. ನಮ್ಮ ಗುರಿಯನ್ನು ಸಾಧಿಸುವುದರ ಸಲುವಾಗಿ ನಾವು ಇನ್ನೊಬ್ಬರನ್ನು ಅವಲಂಬಿಸಿಲ್ಲ. ಮುಸ್ಲಿಂಲೀಗು ತನ್ನ ಗುರಿಯನ್ನು ಸಾಧಿಸುವದಕ್ಕಾಗಿ ಬೇಕಾದ ರಾಷ್ಟ್ರಗಳನ್ನು ಎದುರಿಸಲು ಸಿದ್ಧವಿದೆ.

ಪಾಕಿಸ್ತಾನ ಸಲುವಾಗಿ ನಾವು ಬ್ರಿಟಿಷರನ್ನೇ ಅವಲಂಬಿಸಿರುವೆವೆಂದು ಹೇಳಿತ್ತು ಮುಸ್ಲಿಮರನ್ನು ಹಳಿಯುವದನ್ನು ಮಹಾತ್ಮಾಜಿಯವರು ಬಿಡಲಿ, 'ಕೆಲ ಮುಸ್ಲಿಂ ಗೆಳೆಯರು' ಎಂದು ಅನ್ನುವದನ್ನು ಮಹಾತ್ಮಾಜಿಯವರು ಬಿಡಲಿ ಮುಸ್ಲಿಮರನ್ನಾದರೂ ಹಿಂದೂಗಳಂತೆಯೇ ಸಮಾಧಾನಕರದಿಂದ ನೋಡಿ ಮಾನದಿಂದ ಕೂಡಿದ ಒಂದು ಮೆಟ್ಟಲಿಗೆ ಬರಬೇಕು. ನಂತರ ಮಹಾತ್ಮಾಜಿಯವರು ಕೇವಲ ಹಿಂದೂಮುಸ್ಲಿಂ ಅಷ್ಟೇ ಅಲ್ಲದೆ ಉಳಿದ ಲಕ್ಷಾವಧಿ ಅಲ್ಪ ಸಂಖ್ಯಾಕರಿಗೆ ಸೇವೆಯನ್ನು ಸಲ್ಲಿಸಿದಂತಾಗುವುದು.

ನೀವು ಬಲ್ಲಿರಾ ?

(ಎಂ. ಎ. ನಾರಾಯಣ, ಒಂಟಿಕೊಪ್ಪಲ್)

ನಾವು ನಡೆಯುವಾಗ ಒಂದು ಹೆಜ್ಜೆ ಇಡಬೇಕಾದರೆ ನಮ್ಮ ಶರೀರದ 43 ನರಗಳು ಕೆಲಸಮಾಡಬೇಕಂತೆ.

ಒಳ್ಳೇ ಜಾತಿಯ ಚೇಟೆ ನಾಯಿಯು ಗಂಟೆಗೆ 60 ಮೈಲಿ ಓಡಬಲ್ಲದಂತೆ.

ಪೋಲಾರ್ ಬೇರ್ ಎಂಬ ಭೀಕರ ಕರಡಿಯು ಹೆಚ್ಚು ಕಡಿಮೆ ಅರ್ಧ ಟನ್ ಭಾರವಿರುವುದಂತೆ.

ಅಮೇರಿಕಾ ಸಂಯುಕ್ತಸಂಸ್ಥಾನದ ಬಾಸ್ಟನ್ ನಗರದಲ್ಲಿ ದಿನ ಒಂದಕ್ಕೆ ಸುಮಾರು 75 ಮಿಲಿಯ ಟೆಲಿಫೋನ್ ಸಂಭಾಷಣೆಯಾಗುತ್ತಂತೆ.

ಪ್ರಪಂಚದಲ್ಲೆಲ್ಲಾ ದೊಡ್ಡ ಜಾಕಂಡನಲ್ಲಿದೆ ಅದಕ್ಕೆ 1851 ಅಲಗುಗಳಿವೆಯಂತೆ.

ಕೋಗಿಲೆಯು ಬೇರೆ ಪಕ್ಷಿಗಳ ಗೂಡಿನಲ್ಲಿ ಮೊಟ್ಟೆಗಳನ್ನಿಟ್ಟರೂ, ಈ ರೀತಿ ಇಡುವುದು ಗೂಡಿಗೆ ಒಂದು ಮೊಟ್ಟೆಯೇ ಮಾತ್ರವಂತೆ.

Edited, Printed & published by M.S. Krishna Rao, at the Satyavadi Pres., Chamaraja Agrahar, Mysore

EXCELLENT OPPORTUNITIES

exist for young men

between the ages of 17 ½ and 24 years

in the

Communication Branch

of the

Royal Indian Navy

AS SIGNALMEN & WIRELESS TELEGRAPHISTS

No Previous Experience is Necessary

Candidates should have studied upto Matriculation standard — must have a good knowledge of English, and be able to write it clearly .... and .... neatly.

Starting Pay Rs. 60 per Mensem
with free Rations, Clothing & Accommodation

Apply Personally or by Letter to:

THE TECHNICAL RECRUITING OFFICE,

BANGALORE, MADRAS, COIMBATORE, TRIVANDRUM, TRICHY OR BEZWADA.

ವಿನೋದರಂಜಿನಿ ನಂ. 6, ಬಹುಮಾನ ರೂ. 150

ಮೊದಲನೆ ಬಹುಮಾನ ರೂ. 90. ಇತರ ಬಹುಮಾನ ರೂ. 60.

ಪ್ರವೇಶಧನ 1 ಉತ್ತರಕ್ಕೆ 3 ಆಣೆ 4 ಉತ್ತರಗಳಿಗೆ 8 ಆಣೆ ಉತ್ತರ ತಲಪಿಸಲು ಕಡೇ ತಾ. 26-7-42

ಸರಿಯಾದ ಉತ್ತರ 29-7-42 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು.

ನಿಬಂಧನೆಗಳು ಮಾಮೂಲಿನಂತೆ. ಎಲ್ಲರೂ ಮ್ಯಾನೇಜರ ತೀರ್ಮಾನಕ್ಕೆ ಬದ್ಧರಾಗಿರಬೇಕು

ವಿನೋದರಂಜಿನಿ C/o ಸತ್ಯವಾದಿ ಆಫೀಸು, ಚಾಮರಾಜಪುರು, ಮೈಸೂರು

ಮೈಸೂರಿನವರು ಲ್ಯಾಂಸ್‌ಡೌನ್ ಬಜಾರಿನಲ್ಲಿರುವ ಮೊಕ್ತಾರ್ ಕಂಪೆನಿಯಲ್ಲಿ ಕೊಡಬಹುದು



ಹೆಸರು ವಿಳಾಸ ಸ್ಪಷ್ಟವಾಗಿರಲಿ.

ಎಡದಿಂದ ಬಲಕ್ಕೆ—1 ಇದರ ಮೇಲೆ ಅಭಿಮಾನವಿಲ್ಲದವರು ಅತಿ ವಿರಳ. 5 ಒಂದು ವಿಧದ ಜಮಾನು. 6 ಯುದ್ಧದಲ್ಲಿ ಹೊಸ ಹೊಸ "ಇದಕ್ಕೆ" ಎನು ಕಡಮೆ 8 ಈತನಿಗೆ ಹೊತ್ತುಹೊತ್ತಿಗೆ ಸರಿಯಾಗಿ ಊಟೋಪಚಾರಗಳು ದೊರೆಯುವುದು ದುರ್ಲಭವಲ್ಲವೇ? 10 ಇದು ಮನುಷ್ಯನ ಶರೀರದಲ್ಲಿದೆ (ಹಿಂದುಮುಂದಾಗಿದೆ)

ಮೇಲಿನಿಂದ ಕೆಳಕ್ಕೆ—1 ಮನುಷ್ಯ 2. ನಾವು ಕೆಲಸಗಳನ್ನು — ವಾಗಿ ಮಾಡಬೇಕು. 3 ಜನರ ಯೋಗ್ಯತೆಯನ್ನು ಅವರ "ಇದರ" ಮೇಲೆ ಊಹಿಸಬಹುದು. 4 ದೇವಸ್ಥಾನ (ತಾರುಮಾರಾಗಿದೆ) 6 ಇದನ್ನು ಮಾಡಿದವರನ್ನು ಮರೆಯುವುದಕ್ಕಾಗುವುದಿಲ್ಲ. 7 ಇದು ಬಂದಾಗ ವೆತ್ಯಾಸಗೊಳ್ಳದ ಏನೇ ನಿಜವಾದ ಮಾನವನು. 9 ಒಡವ.

ಹಿಟ್ಲರನು ಗಡಬಿಡಿಯಲ್ಲಿದ್ದಾನೆ

"ಸೋವಿಯಟ್ ವಾರ್ ನ್ಯೂಸ್" ನಲ್ಲಿ ಕರ್ನಲ್ ಗ್ಯಾನ್ಯಿಲೋಹ ಎಂಬುವರು 'ಹಿಟ್ಲರನು ತೀರ ಗಡಬಿಡಿಯಲ್ಲಿದ್ದಾನೆ' ಎಂದು ಒರೆದಿದ್ದಾರೆ. ಯಾಕೆಂದರೆ ಒಂದರ ಮೇಲೊಂದು ಯೂರೋಪಿನಲ್ಲಿ ಎರಡು ಫ್ರೆಂಟುಗಳು. ಮತ್ತು ಸೋವಿಯಟ್ಟಿನಲ್ಲಿ ಎರಡು ಚಳಿಗಾಲಗಳು ಇವನೆದುರಿಗೆ ಬಂದಿದೆ. ಇವನು ತೀರ ಗಡಬಿಡಿಯಲ್ಲಿರುವುದರಿಂದ ವೋಹರೋಜವು ವಶವಾಗಿದೆ ಎಂದು ಒಮ್ಮೆಲೇ ಹೇಳಿಕೆ ಕೊಟ್ಟನು, ಆದರೆ ಅದು ಇನ್ನೂ ಸೋವಿಯಟ್ಟಿನ ಕೈಲಿದೆ. ಈ ತರಹದ ಗಡಿಬಿಡಿಯಿಂದ ಹಿಟ್ಲರನು ಏನನ್ನು ಪಡೆಕೊಳ್ಳುವನೋ ?

o o o

ಮಹಾತ್ಮಾ ಗಾಂಧಿಯವರು

ಬೊಂಬಾಯಿನಲ್ಲಿ ಆಗಸ್ಟ್ 4 ರಲ್ಲಿ ಕೂಡಲಿರುವ ವರ್ಕಿಂಗ್ ಕಮಿಟಿಯಲ್ಲೂ, ಮತ್ತು 7 ನೆ ತಾರೀಖಿನಲ್ಲಿ ಕೂಡುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲೂ ಭಾಷಣಮಾಡುವರೆಂದು ಹೇಳಲಾಗಿದೆ.

NEW OPERA TALKIES

(The Beauty Spot of Mysore)

From 24-7-42



KRISHNAKUMAR

(Tamil — A Puranic Picture)

ಕೃಷ್ಣಕುಮಾರ್

(ಪೌರಾಣೀಕ ಚಿತ್ರ)



Edited, Printed & published by M.S. Krishna Rao, at the Satyavadi Press, Chamaraja Agrahar, Mysore